ಈ) ದಿನಾಂಕ 15–01–2014ರ ಅಂತ್ಯಕ್ಕೆ 14 ವರ್ಷ ಶಿಕ್ಷೆ ಪೂರೈಸಿರುವ ಜೀವಾವಧಿ ಶಿಕ್ಷಾ ಬಂದಿಗಳ ವಿವರ ಈ ಕೆಳಗಿನಂತಿರುತ್ತದೆ.

ಕೇಂದ್ರ ಕಾರಾಗೃಹ	ಪುರುಷರು	ಮಹಿಳೆಯರು	ಒಟ್ಟು
ಬೆಂಗಳೂರು	155	02	157
ಬೆಳಗಾವಿ	90	–	90
ಬಳ್ಳಾರಿ	31	–	31
ಮೈಸೂರು	64	–	64
ಗುಲ್ಬರ್ಗಾ	43	–	43
ಬಿಜಾಪುರ	39	–	39
ಧಾರವಾಡ	17	–	17
ಒಟ್ಟು	**439**	**02**	**441**

ಉ) ಅಕಾಲಿಕ ಬಿಡುಗಡೆಗೆ ಸಂಬಂಧಿಸಿದಂತೆ, ದಿನಾಂಕ: 07–01–2014ರಂದು ಸರ್ಕಾರವು ಮಾರ್ಗಸೂಚಿಗಳನ್ನು ರಚಿಸಿದ್ದು, ಅದರನ್ವಯ ಕಾರಾಗೃಹ ಸಲಹಾ ಮಂಡಳಿಗಳ ಶಿಫಾರಸ್ಸಿನ ಮೇರೆಗೆ ಕಾರಾಗೃಹ ಇಲಾಖೆಯು ಕಳುಹಿಸುವ ಪ್ರಸ್ತಾವನೆಗಳನ್ನು ಪರಿಶೀಲಿಸಿ ಶೀಘ್ರವೇ ಬಿಡುಗಡೆಗೆ ಕ್ರಮ ಕೈಗೊಳ್ಳಲಾಗುವುದು.

ಪೊಲೀಸ್ ಸಿಬ್ಬಂದಿಗೆ ವಸತಿ ಗೃಹ ನಿರ್ಮಾಣ

453(343) ಶ್ರೀ ಡಾ॥ ಗುರುಪಾದಪ್ಪ ನಾಗಮಾರಪಳ್ಳಿ (ಬೀದರ್)

ಅ) 2011–12 ನೇ ಸಾಲಿನಲ್ಲಿ ಬೀದರ್ ನಗರದಲ್ಲಿ ಜಿಲ್ಲಾ ಸಶಸ್ತ್ರ (ಡಿ.ಎ.ಆರ್) ಪೊಲೀಸ್ ಪೇದೆಗಳಿಗಾಗಿ ಪೊಲೀಸ್ ಹೌಸಿಂಗ್ ಕಾರ್ಪೋರೇಷನ್ ಮೂಲಕ 1.40 ಕೋಟಿ ರೂಪಾಯಿಗಳ ವೆಚ್ಚದಲ್ಲಿ ವಸತಿ ಗೃಹ ಕಟ್ಟಡಗಳ ಸಂಕೀರ್ಣವನ್ನು ನಿರ್ಮಿಸಿರುವುದು

ನಿಜವಲ್ಲವೇ; (ನಿರ್ಮಿಸಿರುವ ಗುತ್ತಿಗೆದಾರರ/ಸಂಸ್ಥೆಯ ಹೆಸರು ವಿವರ ನೀಡುವುದು)

ಆ) ಈ ನಿರ್ಮಾಣ ಕಾರ್ಯ ಎಂದು ಪ್ರಾರಂಭಗೊಂಡಿತು ಮತ್ತು ಎಂದು ಪೂರ್ಣಗೊಂಡಿರುತ್ತದೆ; ಈ ವಸತಿ ಸಂಕೀರ್ಣದಲ್ಲಿ ಸಿಬ್ಬಂದಿ ವರ್ಗಕ್ಕೆ ಕಲ್ಪಿಸಿರುವ ಅನುಕೂಲಗಳೇನು;

ಇ) ಈ ವಸತಿ ಗೃಹ ಕಟ್ಟಡ ಸಂಕೀರ್ಣದ ನಿರ್ಮಾಣ ಕಾರ್ಯ ನಿಗಧಿತ ಅವಧಿಯಲ್ಲಿ ಮತ್ತು ಉತ್ತಮಗುಣಮಟ್ಟದಲ್ಲಿ ಪೂರ್ಣಗೊಂಡಿದೆಯೇ;

ಈ) ಹಾಗಿದ್ದಲ್ಲಿ, ಈ ವಸತಿ ಗೃಹದ ನಿರ್ಮಾಣ ಕಾರ್ಯವನ್ನು ನಿಗಧಿತ ಅವಧಿಯಲ್ಲಿ ಮತ್ತು ಉತ್ತಮ ಗುಣಮಟ್ಟದಿಂದ ನಿರ್ಮಿಸಿರುವ ಗುತ್ತಿಗೆದಾರರಿಗೆ/ ಸಂಸ್ಥೆಗೆ ಬೀದರ್ ಜಿಲ್ಲೆಯ ಆಗಿನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಪ್ರಶಂಸಾ ಪತ್ರವನ್ನು ನೀಡಿ ಗೌರವಿಸಿರುವುದು ನಿಜವೇ;

ಉ) ಪ್ರಸಕ್ತ ಸಾಲಿನಲ್ಲಿ ಜಿಲ್ಲಾದ್ಯಂತ ಇರುವ ಪೊಲೀಸ್ ಸಿಬ್ಬಂದಿ ವರ್ಗಕ್ಕೆ ವಸತಿ ಸೌಲಭ್ಯವನ್ನು ಕಲ್ಪಿಸಲು ಸರ್ಕಾರದ ಮುಂದಿರುವ ಯೋಜನೆಗಳೇನು?

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹಸಚಿವರು)

ಅ) ಬೀದರ್ ನಗರದಲ್ಲಿ ಜಿಲ್ಲಾ ಸಶಸ್ತ್ರ (ಡಿ.ಎ.ಆರ್) ಪೊಲೀಸ್ ಪೇದೆಗಳಿಗಾಗಿ ರೂ. 189.10 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ವಸತಿಗೃಹ ಕಟ್ಟಡಗಳ ಸಂಕೀರ್ಣವನ್ನು ನಿರ್ಮಿಸಿರುವುದು ನಿಜ. ನಿರ್ಮಿಸಿರುವ ಗುತ್ತಿಗೆದಾರರ ಹೆಸರು ಶ್ರೀ. ಗುರುನಾಥ ಕೊಳ್ಳೂರು, ಕ್ಲಾಸ್–1 ಗುತ್ತಿಗೆದಾರರು, ಬೀದರ್.

ಆ) ಈ ನಿರ್ಮಾಣ ಕಾರ್ಯವು ದಿನಾಂಕ 06/05/2010 ರಂದು ಪ್ರಾರಂಭಗೊಂಡು ದಿನಾಂಕ:02/05/2011 ರಂದು ಮುಕ್ತಾಯ ಗೊಂಡಿರುತ್ತದೆ. ಈ ವಸತಿ ಸಂಕೀರ್ಣದಲ್ಲಿ ನೂತನ ಮಾದರಿಯಲ್ಲಿ ಎರಡು ಬೆಡ್ ರೂಂಗಳ ಸೌಕರ್ಯವನ್ನು ಸೀಲಿಂಗ್ ಫ್ಯಾನ್ ಸಮೇತ ಕಟ್ಟಲಾಗಿದೆ. ಬಿಸಿ ನೀರಿಗಾಗಿ ಸೋಲಾರ್ ಸಿಸ್ಟಮ್ ಅಳವಡಿಸಿದೆ. ಯಾವುದೇ ರೀತಿಯ ಅನಾನೂಕೂಲತೆಗಳಾದ ರೀತಿಯಲ್ಲಿ ಕಟ್ಟಡವನ್ನು ನಿರ್ಮಾಣ ಮಾಡಲಾಗಿದೆ.

ಇ) ಸದರಿ ಸಂಕೀರ್ಣವು ನಿಗದಿತ ಅವಧಿಗಿಂತ ಮುಂಚಿತವಾಗಿಯೇ ಉತ್ತಮ ಗುಣಮಟ್ಟದಲ್ಲಿ ಪೂರ್ಣಗೊಂಡಿದೆ.

ಈ) ನಿಗದಿತ ಅವಧಿಯಲ್ಲಿ ವಸತಿ ಗೃಹಗಳನ್ನು ನಿರ್ಮಿಸಿರುವ ಗುತ್ತಿಗೆದಾರರಾದ ಶ್ರೀ. ಗುರುನಾಥ ಕೊಳ್ಳೂರು, ಕ್ಲಾಸ್–1 ಗುತ್ತಿಗೆದಾರರು, ಬೀದರ್ ರವರಿಗೆ ಆಗಿನ ಪೊಲೀಸ್ ಅಧೀಕ್ಷಕರು ದಿನಾಂಕ: 25.06.2011 ರಂದು ಪ್ರಶಂಸನಾ ಪತ್ರವನ್ನು ನೀಡಿರುತ್ತಾರೆ.

ಉ) ಬೀದರ್ ಜಿಲ್ಲೆಗೆ ಒಟ್ಟು 262 ಪೊಲೀಸ್ ಅಧಿಕಾರಿ/ಸಿಬ್ಬಂದಿಯವರ ಪೊಲೀಸ್ ವಸತಿ ಗೃಹಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ರಸ್ತೆಗಳ ಕಾಂಕ್ರೀಟೀಕರಣ ಯೋಜನೆ

456(705) ಶ್ರೀ ಹ್ಯಾರೀಸ್ ಎನ್.ಎ. (ಶಾಂತಿನಗರ)

ಅ) ನಗರದ ಪ್ರಮುಖ 45 ರಸ್ತೆಗಳನ್ನು ಕಾಂಕ್ರೀಟ್ ರಸ್ತೆಯನ್ನಾಗಿ ಅಭಿವೃದ್ಧಿ ಪಡಿಸಲು ರೂಪಿಸಿದ್ದ ಯೋಜನೆಗಳಾವುವು (ಪ್ರಗತಿ ಕುರಿತಾದ ವಿವರ ನೀಡುವುದು)

ಆ) ಸದರಿ ಕಾಮಗಾರಿಗಾಗಿ ಮೀಸಲಿಟ್ಟ ಹಣದ ಮೊತ್ತ ಎಷ್ಟು;